# ಕರ್ಮವೊಂದು ಆಧ್ಯಾತ್ಮಿಕ ಸಾಧನೆ

ಸ್ವಾಮಿ ಭಜನಾನಂದ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

ಇಚ್ಛಾಶಕ್ತಿಯನ್ನು ಸತತವಾಗಿ ಆಸೆಗಳಿಂದ ಪ್ರತ್ಯೇಕಿಸುತ್ತಾ ಸಾಮಾನ್ಯ ಕೆಲಸಗಳನ್ನು ಸ್ವಂತ ಮುಕ್ತಿಯ ಹಾಗೂ ಇತರರ ಒಳಿತಿನ ಸಾಧನವಾಗಿ ಪರಿವರ್ತಿಸುವ ಒಂದು ಆಧ್ಯಾತ್ಮಿಕ ಸಾಧನೆಯೇ ಕರ್ಮಯೋಗ.

ಆಸೆಗಳು ಎರಡು ವಿಧ : ಪ್ರತ್ಯಕ್ಷವಾಗಿ ಕಾಣುವ ಇಂದ್ರಿಯ ವಿಷಯಗಳ ಆಸೆ ಮತ್ತು ವರ್ತಮಾನದ ಕರ್ಮಫಲವಾಗಿ ಮುಂದೆ ದೊರೆಯುವ ಅದೃಷ್ಟ ಸುಖದ ಆಸೆ. ಮೊದಲನೆಯ ವಿಧದ ಆಸೆಗಳು ಪ್ರಾಣಿಗಳಲ್ಲೂ ಸಹಜ ಪ್ರವೃತ್ತಿಯ ರೂಪದಲ್ಲಿರುತ್ತವೆ. "ಆಶಾ" ಅಥವಾ "ಈಪ್ಸಾ" ಎಂಬ ಎರಡನೇ ವಿಧದ ಆಸೆಗಳು ಮಾನವನಿಗೆ ಮಾತ್ರವೇ ಸಂಬಂಧಿಸಿದ ವೈಶಿಷ್ಟ್ಯ ಮತ್ತು ಕರ್ಮಯೋಗವು ಹೆಚ್ಚಾಗಿ ಇದಕ್ಕೆ ಸಂಬಂಧಿಸಿದೆ. ಮೊದಲೇ ಹೇಳಿದಂತೆ ಇಚ್ಛಾಶಕ್ತಿಯು ಆಸೆಗಳೊಡನೆ ಸೇರಿಕೊಂಡಾಗ ಮಾತ್ರವೇ ಎರಡೂ ವಿಧದ ಆಸೆಗಳು ಆತ್ಮನ ಬಂಧನಕ್ಕೆ ಕಾರಣವಾಗುತ್ತವೆ.

ಇಚ್ಛಾಶಕ್ತಿಯನ್ನು ಆಸೆಗಳಿಂದ ಪ್ರತ್ಯೇಕಿಸಿದರೆ ಆತ್ಮವು ಸಾಕ್ಷಿಯಾಗಿ ಉಳಿಯುತ್ತದೆ. ಆಗಲೇ ಜ್ಞಾತನು ಆಸೆಗಳು ಹೇಗೆ ಕೆಲಸ ಮಾಡುತ್ತವೆ—ಹೇಗೆ ಅವು ಮೂಡುವುವು, ಹೇಗೆ ಅದೃಶ್ಯವಾಗುವುವು, ಹೇಗೆ ಅವು ಜೀವಿಯನ್ನು ವಿವಿಧ ಕಾರ್ಯಗಳಲ್ಲಿ ತೊಡಗಿಸುವುವು ಎಂಬುದನ್ನು ನೋಡಬಲ್ಲನು. "ಸಂಧ್ಯಾ" ಎಂಬ ದೈನಂದಿನ ವೈದಿಕ ವಿಧಿಯು ಸಾಧಕನಿಗೆ ಈ ನಿರಾಸಕ್ತಿಯ ಭಾವವನ್ನು ಹೇಳಿಕೊಡು ವುದು : "(ದೇವತೆಗಳಿಗೆ) ನಮಸ್ಕಾರ. ಆಸೆ ಕ್ರಿಯೆಗಳನ್ನು ಮಾಡಿತು. ಆಸೆ ಕ್ರಿಯೆಯನ್ನು ಮಾಡುತ್ತಿದೆ, ನಾನಲ್ಲ..." (**ಕಾಮೋಽಕಾರ್ಷೀನ್ನಮೋ ನಮಃ, ಕಾಮೋಽಕಾರ್ಷೀತ್, ಕಾಮಃ ಕರೋತಿ ನಾಹಂ ಕರೋಮಿ...**). ಎಲ್ಲ ಆಸೆಗಳು ಪ್ರಕೃತಿಯ ಚಲನೆಯ ಅಂಗಗಳು, ಹಾಗೆಯೇ ಎಲ್ಲ ಕಾರ್ಯಗಳೂ ಕೂಡ. ಆತ್ಮಜ್ಞಾನಿಯು ಪ್ರಕೃತಿಯೇ ಒಳಗೆ ಹೊರಗೆ ಕೆಲಸ ಮಾಡುವುದನ್ನು ವೀಕ್ಷಿಸುವನು (*ಭಗವದ್ಗೀತೆ*, ೩.೨೭,೨೮, ೨೯, ೩೩). ತಂತ್ರಗಳು ಪ್ರಕೃತಿಯನ್ನು ಬ್ರಹ್ಮನ ಶಕ್ತಿಯನ್ನಾಗಿ ಪರಿಗಣಿಸುವುವು ಮತ್ತು ಎಲ್ಲ ಕಾರ್ಯಗಳನ್ನು ಆ ಜಗನ್ಮಾತೆಯು ತನ್ನ ನಿಗೂಢ ಇಚ್ಛಾಶಕ್ತಿಯಿಂದ ನಡೆಸುತ್ತಿರುವಳೆಂದು ನಂಬುವುವು.

**ಸಾಮಾನ್ಯ ಕೆಲಸವು ಹಿಮಚೆಂಡಿನ ಪರಿಣಾಮದಂತೆ : ಒಂದು ಕೆಲಸವು ಮತ್ತೊಂದಕ್ಕೆ ಆಸ್ಪದ ನೀಡುವುದು; ಹೆಚ್ಚು ಕೆಲಸ ಮಾಡಿದಷ್ಟೂ ಇನ್ನೂ ಹೆಚ್ಚು ಕೆಲಸ ಮತ್ತೂ ಹೆಚ್ಚು ಬಂಧನ.**

ಸಾಮಾನ್ಯ ಕೆಲಸವು ಹಿಮಚೆಂಡಿನ ಪರಿಣಾಮದಂತೆ: ಒಂದು ಕೆಲಸವು ಮತ್ತೊಂದಕ್ಕೆ ಆಸ್ಪದ ನೀಡುವುದು; ಹೆಚ್ಚು ಕೆಲಸ ಮಾಡಿದಷ್ಟೂ, ಇನ್ನೂ ಹೆಚ್ಚು ಕೆಲಸ ಮತ್ತು ಹೆಚ್ಚು ಬಂಧನ. ಇಂತಹ ಸುಳಿಯೊಳಗೆ ಸಿಲುಕಿರುವ ಆತ್ಮನ ಬಿಡುಗಡೆಯಾಗುವಂತೆ ಕೆಲಸವನ್ನು ಪರಿವರ್ತಿಸುವುದೇ ಕರ್ಮಯೋಗ. ಪ್ರಕೃತಿಗೇ ಎಲ್ಲ ಕೆಲಸಗಳನ್ನೂ ಮಾಡಲು ಬಿಟ್ಟು, ಕೆಲಸದಲ್ಲಿ ತೊಡಗಿಸಿಕೊಳ್ಳುವ ಆತ್ಮನನ್ನು ಕ್ರಮವಾಗಿ ಮುಕ್ತಗೊಳಿಸುವ ಒಂದು ಸಾಧನವಿದು. ಇದನ್ನೇ ಗೀತೆಯು "ಕರ್ಮಕೌಶಲ್ಯ" ಎಂದು ಕರೆಯುತ್ತದೆ (*ಅದೇ*, ೨.೫೦). ಈ ಕೌಶಲ್ಯವು ಮನಸ್ಸಿನಲ್ಲಿದೆಯೇ ಹೊರತು ಬಾಹ್ಯ ಕಾರ್ಯಗಳಲ್ಲಿ ಅಲ್ಲ. ಕರ್ಮಯೋಗವು ಒಂದು ಮಾನಸಿಕ ಶಿಕ್ಷಣ. ಇದು ಮನಸ್ಸನ್ನು ನಿಗ್ರಹಿಸುವ ಒಂದು ಶಿಕ್ಷಣ. ಮನಸ್ಸನ್ನು ನಿಗ್ರಹಿಸಲು ಅದಕ್ಕಿಂತಲೂ ಉನ್ನತವಾದುದು ಬೇಕು. ಶುದ್ಧ ಚೈತನ್ಯ ಹಾಗೂ ಶುದ್ಧ ಇಚ್ಛಾಶಕ್ತಿಯ ಸ್ಥಾನವಾದ "ಬುದ್ಧಿ" ಮಾತ್ರವೇ ಮನಸ್ಸನ್ನು ನಿಗ್ರಹಿಸಬಲ್ಲದು. ಎಲ್ಲಿಯವರೆಗೆ ಈ ಉನ್ನತ ಅಂತರ್ದೃಷ್ಟಿಯು ಸ್ವಲ್ಪಮಟ್ಟಿಗಾದರೂ ವಿಕಸನಗೊಳ್ಳುವುದಿಲ್ಲವೋ, ಅಲ್ಲಿಯವರೆಗೂ ಕರ್ಮಯೋಗವನ್ನು ಮಾಡಲಾಗುವುದಿಲ್ಲ. ವಾಸ್ತವವಾಗಿ "ಬುದ್ಧಿ"ಯು ಉದಿಸಿ, ಮುಂದೆ ಬಂದು, ಕರ್ಮವನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡಾಗಲೇ ಅದು ಕರ್ಮಯೋಗವಾಗುವುದು. ಆದ್ದರಿಂದಲೇ ಗೀತೆಯು ಕರ್ಮಯೋಗವನ್ನು "ಬುದ್ಧಿಯೋಗ" ವೆಂದು ಕರೆಯುವುದು (*ಅದೇ*, ೨.೪೯; ೧೦.೧೦;೧೮.೫೭).

## ಕರ್ಮವನ್ನು ಕರ್ಮಯೋಗವನ್ನಾಗಿ ಪರಿವರ್ತಿಸುವ ನಿಯಮಗಳು

ಮೇಲಿನ ವಿವರಣೆಗಳಿಂದ ಕರ್ಮಯೋಗವು ಸುಲಭದ ಹಾದಿಯಲ್ಲವೆಂದು ಸ್ಪಷ್ಟವಾಗಿ ತಿಳಿಯುವುದು. ಉಳಿದ ಯೋಗಗಳಿಗೆ ಅವಶ್ಯವಿರುವಂತೆ ಶಾಂತವಾಗಿ ಏಕಾಂತವಾದ ಸ್ಥಳದಲ್ಲಿ ಕುಳಿತುಕೊಳ್ಳುವುದು, ಶಾಸ್ತ್ರಪಾರಂಗತ್ಯ, ಗುರುವಿನ ಮಾರ್ಗದರ್ಶನ ಮುಂತಾದವು ಇದಕ್ಕೆ ಬೇಡ, ನಿಜ. ಯಾರು ಬೇಕಾದರೂ, ಎಲ್ಲಿ ಬೇಕಾದರೂ, ಯಾವಾಗ ಬೇಕಾದರೂ ಅಭ್ಯಾಸ ಮಾಡಬಹುದು. ಆದರೆ ಇದೊಂದು ಸುಲಭದ ಮಾರ್ಗ ಹಾಗೂ ಹೇಗಾದರೂ ಮುಂದುವರಿಯಬಹುದೆಂಬ ಜನಸಾಮಾನ್ಯರಲ್ಲಿ ಪ್ರಚಲಿತವಾಗಿರುವ ತಿಳುವಳಿಕೆಯು ತಪ್ಪು. ಕರ್ಮವನ್ನು ಕರ್ಮ

ಯೋಗವನ್ನಾಗಿ ಪರಿವರ್ತಿಸಲು ಕೆಲವು ಮಾನಸಿಕ ನಿಯಮಗಳ ಪೂರೈಕೆ ಅಗತ್ಯ. ವಿವೇಕ, ಅನಾಸಕ್ತಿ, ಹಾಗೂ ವ್ಯಾಕುಲತೆಗಳು ಎಲ್ಲ ಯೋಗಗಳಿಗೂ ಬೇಕಾದ ಮೂಲಭೂತ ಆವಶ್ಯಕತೆಗಳು. ಆದರೆ ಅವುಗಳ ಅಭಿವ್ಯಕ್ತಿ ಹಾಗೂ ಪ್ರಯೋಗಗಳು ವಿಭಿನ್ನ ಯೋಗಗಳಲ್ಲಿ ವಿಭಿನ್ನ ರೂಪವನ್ನು ಪಡೆಯುತ್ತವೆ.

ಕರ್ಮಯೋಗದಲ್ಲಿ ವ್ಯಾಕುಲತೆ ಎಂದರೆ ಕೇವಲ ಸ್ವಂತ ಮುಕ್ತಿಯ ಹಂಬಲವಲ್ಲದೆ ಇತರರ ಹಿತಚಿಂತನೆಯೂ ಸೇರಿಕೊಳ್ಳುತ್ತದೆ. ವಿವೇಕಾನಂದರು ಹೇಳುತ್ತಾರೆ : "ಇತರರಿಗೆ ಉಪಯೋಗವಾಗದ, ಅಜ್ಞಾನ ಹಾಗೂ ಮಾಯೆಯಲ್ಲಿ ಮುಳುಗಿರುವ ಜನರ ಹಿತವನ್ನು ಬಯಸದ, ಕಾಮಿನಿ ಕಾಂಚನಗಳ ಹಿಡಿತದಿಂದ ಅವರು ತಪ್ಪಿಸಿಕೊಳ್ಳಲು ಸಹಾಯ ಮಾಡದ ಆಧ್ಯಾತ್ಮಿಕ ಸಾಧನೆ ಅಥವಾ ಸಾಕ್ಷಾತ್ಕಾರದಿಂದ ಯಾವ ಒಳಿತಿದೆ? ಎಲ್ಲಿಯವರೆಗೆ ಒಂದೇ ಒಂದು ಜೀವ ಬಂಧನದಲ್ಲಿರುವುದೋ, ಅಲ್ಲಿಯವರೆಗೆ ನಿಮಗೆ ಮುಕ್ತಿ ದೊರೆಯುವುದೆಂದು ತಿಳಿದಿರುವಿರಾ?" (*ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ,* ಸಂಪುಟ ೮, ಪು. ೨೩೧-೩೨). ಕರ್ಮಯೋಗಿಯ ಉತ್ಕಾಂಕ್ಷೆಯೇ ಆತನ ಜೀವನದ ಧ್ಯೇಯ. ತನ್ನ ಜೀವನಕ್ಕೆ ಒಂದು ನಿರ್ಧಾರಿತ ಗುರಿಯಿದೆಯೆಂದು ಭಾವಿಸಿ, ಎಲ್ಲ ಕಾರ್ಯಗಳನ್ನು ಅದರೊಡನೆ ಸಂಬಂಧಿಸಬೇಕು.

ಕರ್ಮಯೋಗಿಯ ನಿರಾಸಕ್ತಿಯು ನೈತಿಕತೆ ಅಥವಾ ಧರ್ಮದ ಮೇಲೆ ಆಧಾರಿತ. ಒಳ್ಳೆಯ ಜೀವನವನ್ನು ನಡೆಸುವ ವ್ಯಕ್ತಿಯ ನಿರಾಸಕ್ತಿಗೆ ಮಾತ್ರವೇ ಆಧ್ಯಾತ್ಮಿಕ ಮೌಲ್ಯವಿದೆ. ಸ್ವಾರ್ಥ, ಅಪರಿಶುದ್ಧ ವ್ಯಕ್ತಿಯ ನಿರಾಸಕ್ತಿಯು ಕೇವಲ ಕ್ರೂರ ಔದಾಸೀನ್ಯ. ಎರಡನೆಯದಾಗಿ, ಕರ್ಮಯೋಗಿಯ ನಿರಾಸಕ್ತಿಗೆ ಪ್ರೀತಿಯೇ ಆಧಾರ. ಯಾರು ನಿರಾಸಕ್ತನೋ ಹಾಗೂ ತನ್ನ ಆತ್ಮಶಕ್ತಿಯ ಮೇಲೆ ನಿರ್ಭರನೋ, ಆತನು ಮಾತ್ರವೇ ಎಲ್ಲರನ್ನೂ ಸಮಾನವಾಗಿ ಪ್ರೀತಿಸಬಲ್ಲನೆಂದು ಆತನಿಗೆ ತಿಳಿದಿದೆ. ಮೂರನೆಯದಾಗಿ ಆತನ ನಿರಾಸಕ್ತಿಯು ವಿಶಾಲ ಅಸ್ತಿತ್ವದ ಅರಿವಿನಿಂದಾಗಿ ಮೂಡಿದ ಅಂಗೀಕಾರ ಮನೋಭಾವನೆಯ ಮೇಲೆ ಆಧಾರಿತ. ಆತನು ತನ್ನ ದೌರ್ಬಲ್ಯ ಹಾಗೂ ಸಾಮರ್ಥ್ಯಗಳನ್ನು ಒಪ್ಪಿಕೊಳ್ಳುವನು. ಅದೃಷ್ಟ ಮತ್ತು ದುರಾದೃಷ್ಟ, ಸುಖ ಮತ್ತು ದುಃಖ, ಪ್ರೀತಿ ಮತ್ತು ದ್ವೇಷ, ಒಳ್ಳೆಯದು ಮತ್ತು ಕೆಟ್ಟದ್ದು—ಜೀವನದ ಈ ದ್ವಂದ್ವಗಳು ಅನಿವಾರ್ಯವೆಂದು ಅಂಗೀಕರಿಸುವನು. ಈ ರೀತಿ ಸ್ವೀಕರಿಸುವ ಮನೋಭಾವವೇ ನಿಜವಾದ ನಮ್ರತೆ.

"ಬುದ್ಧಿ" ಅಥವಾ ಉನ್ನತ ಅಂತರ್ದೃಷ್ಟಿ, ಆಂಶಿಕವಾಗಿಯಾದರೂ ವಿಕಸನಗೊಳ್ಳದೆ ಅಥವಾ ಜಾಗೃತಗೊಳ್ಳದೆ ಈ ರೀತಿಯ ವ್ಯಾಕುಲತೆ, ಅನಾಸಕ್ತಿ, ಹಾಗೂ ವಿವೇಕವನ್ನು ದೈನಂದಿನ ಕಾರ್ಯಗಳ ನಡುವೆ ಉಳಿಸಿಕೊಳ್ಳುವುದು ಅಸಾಧ್ಯ. ಮನಸ್ಸಿಗೆ ಎರಡು ಸ್ತರಗಳಿವೆ: ಪ್ರಜ್ಞಾಸ್ತರ, ಮತ್ತು ಅಪ್ರಜ್ಞಾಸ್ತರ. ಮನಸ್ಸು ಎರಡರಿಂದಲೂ ಕೆಲಸ ಮಾಡಬಹುದು. ನಡೆಯುವುದು, ಸೈಕಲ್ ಸವಾರಿ, ಮತ್ತಿತರ ದೈನಂದಿನ ಕಾರ್ಯಗಳು ಹಾಗೂ ಮಾನಸಿಕ ಜೀವನದ ಹೆಚ್ಚಿನಾಂಶವು ಅಪ್ರಜ್ಞಾಸ್ತರದ ನಿಯಂತ್ರಣದಲ್ಲಿದೆ. ಆದ್ದರಿಂದಲೇ ನಮಗೆ ಆತ್ಮ-ಪ್ರಜ್ಞೆ ಇರುವುದಿಲ್ಲ. ಈ ರೀತಿಯ ಅಪ್ರಜ್ಞೆಯ ಕರ್ಮಗಳು ಯೋಗವಲ್ಲ. ಕರ್ಮವು ಯೋಗವಾಗಬೇಕಾದರೆ ಅದು ಸತತವೂ ಅರಿವು ಹಾಗೂ ಆತ್ಮಪ್ರಜ್ಞೆಯಿಂದ ಕೂಡಿರಬೇಕು. ಜಾಗೃತ "ಬುದ್ಧಿ"ಯು ಕರ್ಮಕ್ಕೆ ಬೆಂಬಲ ನೀಡಿದಾಗಲೇ ಇದು ಸಾಧ್ಯ. ಈ "ಬುದ್ಧಿ"ಯ ಪರಿಶುದ್ಧತೆ ಹಾಗೂ ಬೆಳವಣಿಗೆಗೆ ಇಂದ್ರಿಯನಿಗ್ರಹ ಅತ್ಯಗತ್ಯ.

## ಕರ್ಮಯೋಗದ ಭಾಗಗಳು

ಪತಂಜಲಿ ಕರ್ಮಯೋಗವನ್ನು ತಪಸ್ಸು (ಆತ್ಮನಿಗ್ರಹ), ಸ್ವಾಧ್ಯಾಯ (ಸ್ವ-ಅಧ್ಯಯನ) ಹಾಗೂ ಈಶ್ವರಪ್ರಣಿಧಾನ (ದೇವರಲ್ಲಿ ಶರಣಾಗುವುದು)—ಇವುಗಳಿಂದ ಕೂಡಿದ ಯೋಗವೆಂದು ವರ್ಣಿಸುತ್ತಾರೆ (*ಯೋಗಸೂತ್ರ,* ೨.೧). ಶ್ರೀಕೃಷ್ಣನ ಪ್ರಕಾರ ಯಜ್ಞ (ತ್ಯಾಗ), ದಾನ (ಧರ್ಮಕಾರ್ಯ) ಹಾಗೂ ತಪಸ್ಸು (ಆತ್ಮನಿಗ್ರಹ)—ಇವು ಮನಸ್ಸನ್ನು ಪರಿಶುದ್ಧಗೊಳಿಸುವುವು, ಆದ್ದರಿಂದ ಇವುಗಳನ್ನು ತ್ಯಜಿಸಬಾರದು (ಭಗವದ್ಗೀತೆ, ೧೮.೫).

**ತಪಸ್ಸು, ಸ್ವಾಧ್ಯಾಯ, ದಾನ ಮತ್ತು ಯಜ್ಞ ಅಥವಾ ಈಶ್ವರಪ್ರಣಿಧಾನ—ಇವುಗಳೆಲ್ಲವೂ ಕೂಡಿ ಕರ್ಮಯೋಗ ಆಗುವುದು.**

ಛಾಂದೋಗ್ಯ ಉಪನಿಷತ್ ಮೂರು ಶಾಖೆಗಳುಳ್ಳ ಧಾರ್ಮಿಕ ಕರ್ತವ್ಯಗಳ ಬಗ್ಗೆ ಹೇಳುತ್ತದೆ : ಯಜ್ಞ, ಅಧ್ಯಯನ ಹಾಗೂ ದಾನಗಳಿಂದ ಕೂಡಿದ ಮೊದಲನೆಯ ಶಾಖೆ, ತಪಸ್ಸಿನಿಂದ ಕೂಡಿದ ಎರಡನೆಯ ಶಾಖೆ; ಹಾಗೂ ತನ್ನ ಗುರುಗಳ ಸಾಮೀಪ್ಯದಲ್ಲಿ ಜೀವನ ನಿರ್ವಹಿಸುವುದು ಮೂರನೆಯ ಶಾಖೆ. ಮೇಲಿನ ವಿವರಣೆಗಳಿಂದ ನಾಲ್ಕು ಸಾಧನಗಳು—ತಪಸ್ಸು, ಸ್ವಾಧ್ಯಾಯ, ದಾನ ಮತ್ತು ಯಜ್ಞ ಅಥವಾ ಈಶ್ವರಪ್ರಣಿಧಾನ—ಇವುಗಳೆಲ್ಲವೂ ಕೂಡಿ ಕರ್ಮಯೋಗ ಆಗುವುದು ಎಂದು ತಿಳಿದುಬರುತ್ತದೆ.

ತಪಸ್ ಎಂಬ ಶಬ್ದವು ತಪ್ ಎಂಬ ಪದದಿಂದ ಬಂದಿದೆ. ಆಸೆಗಳನ್ನು ನಿಯಂತ್ರಿಸು ಅಥವಾ ಹಿಂಗಿಸು ಎಂಬ ಅರ್ಥದಲ್ಲಿ ತಪಸ್ ಪದವನ್ನು ಉಪಯೋಗಿಸುತ್ತಾರೆ. ಆಸೆಗಳ ಬೇರುಗಳನ್ನು ಆಧ್ಯಾತ್ಮಿಕ ಪ್ರಕಾಶನದಿಂದಲ್ಲದೆ ನಾಶಗೊಳಿಸಲು ಸಾಧ್ಯವಿಲ್ಲ. ತಪಸ್ಸಿನ ಗುರಿಯೇ ಆಸೆಗಳ ಶಕ್ತಿಯನ್ನು ಕುಂದಿಸಿ, ಅದನ್ನು "ಬೀಜ" ರೂಪಕ್ಕೆ ಪರಿವರ್ತಿಸುವುದು. ಯಾವಾಗ ಅನೇಕ ಆಸೆಗಳನ್ನು ನಿರೋಧಿಸಿ ಅದರ ಉದ್ರೇಕವನ್ನು ನಿಗ್ರಹಿಸುವೆವೋ ಆಗಲೇ ಆಸೆಗಳಿಂದ ಇಚ್ಛಾಶಕ್ತಿಯನ್ನು ಬೇರ್ಪಡಿಸಲು ಸಾಧ್ಯ. ಆಧುನಿಕ ಯುಗದಲ್ಲಿ ಆತ್ಮ-ನಿಗ್ರಹದ ಅತಿಮುಖ್ಯ ರೂಪವೇ ಬ್ರಹ್ಮಚರ್ಯ. ಕರ್ಮಯೋಗಿಯು ವಿವಿಧ ಸ್ಥಳಗಳಲ್ಲಿ ಭಿನ್ನ ಭಿನ್ನ

ಪ್ರಕೃತಿಯ ಜನಗಳ ಜೊತೆ ಬೆರೆಯಬೇಕಾಗಿರುವುದರಿಂದ ಎಲ್ಲರನ್ನೂ ಪ್ರೀತಿಸುವುದನ್ನು ಕಲಿಯಬೇಕು. ಅಶುದ್ಧವಾದ ಕಾಮಭಾವದಿಂದ ಮುಕ್ತವಾಗದೆ ಇಂತಹ ಪ್ರಯತ್ನವನ್ನು ಮಾಡುವುದು ಅಪಾಯಕಾರಿ.

ಶ್ರೀಶಂಕರರ ಅಭಿಪ್ರಾಯದಲ್ಲಿ ತಪಸ್ ಎಂದರೆ ಏಕಮುಖ ಪ್ರಯತ್ನ ಎಂದು. "ಮನಸ್ಸು ಹಾಗೂ ಇಂದ್ರಿಯಗಳ ಏಕಾಗ್ರತೆಯೇ ಅತ್ಯುನ್ನತ ತಪಸ್ಸು" ಎಂಬ ಮಹಾಭಾರತದ ವಿವರಣೆಯನ್ನು ಅವರು ಒಪ್ಪುತ್ತಾರೆ. ಇದೊಂದು ಪ್ರಾಚೀನ ಭಾರತದ ಆದರ್ಶ. ಋಷಿಗಳು "ಸತ್ಯ"ವನ್ನು ಅರಿಯಬೇಕೆಂದಾಗ, ತಪಸ್ಸನ್ನು ಮಾಡುತ್ತಿದ್ದರು. ಧ್ರುವಕುಮಾರನು ತಂದೆಯ ಪ್ರೀತಿ ಹಾಗೂ ರಾಜ್ಯವನ್ನು ಪಡೆಯಬೇಕೆಂದಾಗ ತಪಸ್ಸನ್ನು ಮಾಡಿದನು. ಪಾರ್ವತಿಯು ಶಿವನನ್ನು ಪತಿಯಾಗಿ ಪಡೆಯಬಯಸಿದಾಗ ತಪಸ್ಸು ಮಾಡಿದಳು. ಅರ್ಜುನನು ದಿವ್ಯಾಯುಧಗಳಿಗಾಗಿ ತಪಸ್ಸು ಮಾಡಿದನು. ಆದ್ದರಿಂದ ತಪಸ್ಸು ಎಂದರೆ ಕಠಿಣವ್ರತ ಹಾಗೂ ಏಕಮುಖ ಪ್ರಯತ್ನಗಳನ್ನು ಒಳಗೊಂಡ ಆತ್ಮನಿಗ್ರಹ. ಆಧುನಿಕ ಯುಗದಲ್ಲಿ ಈ ಅಭಿಪ್ರಾಯವು ತ್ವರಿತಗತಿಯಲ್ಲಿ ಅದೃಶ್ಯವಾಗುತ್ತಿದೆ.

> ಎಲ್ಲ ಜೀವನವೂ ಒಂದೇ ಮತ್ತು ನಮಗೆ ಅಧಿಕವಾಗಿರುವುದನ್ನು ಉಳಿದವರೊಡನೆ ಹಂಚಿಕೊಳ್ಳಲು ಪ್ರಕೃತಿಯೇ ಒತ್ತಾಯಿಸುವುದು.

ಕರ್ಮಯೋಗದ ಮುಂದಿನ ಸಾಧನವಾದ ಸ್ವಾಧ್ಯಾಯವೆಂದರೆ ಸಾಮಾನ್ಯವಾಗಿ ಶಾಸ್ತ್ರಗಳ ಅಧ್ಯಯನ ಅಥವಾ ದೇವರ ನಾಮಜಪ ಎಂದು ಅರ್ಥೈಸುತ್ತಾರೆ. ಇದು ಸಾಧಕನಿಗೆ ಆದರ್ಶ, ಮಾರ್ಗದರ್ಶನ ನೀಡುವುದಲ್ಲದೆ ಮನಸ್ಸನ್ನು ಸದಾ ಉನ್ನತ ಸ್ತರದಲ್ಲಿ ಇಡಲು ಸಹಾಯಕಾರಿ. ನಮ್ಮ ಅನೇಕ ಸಾಮಾನ್ಯ ಸಮಸ್ಯೆಗಳನ್ನು ಮತ್ತು ಮಾನಸಿಕ ತೊಂದರೆಗಳನ್ನು ಸರಿಯಾದ ಅಧ್ಯಯನ ಹಾಗೂ ಆಳವಾದ ಚಿಂತನೆಗಳಿಂದ ನಿವಾರಿಸಬಹುದು. ಸ್ವಾಧ್ಯಾಯವೆಂದರೆ ತನ್ನ ಮನಸ್ಸನ್ನು ಹಾಗೂ ಅದರ ಆಲೋಚನೆಗಳ ಗತಿಯನ್ನು ಅಧ್ಯಯನ ಮಾಡುವುದು ಎಂದೂ ಅರ್ಥೈಸಬಹುದು. "ನಾವು ಏನಾಗಿರುವೆವೋ ಅದು ನಮ್ಮ ಆಲೋಚನೆಗಳ ಪ್ರತಿಫಲ; ಆದ್ದರಿಂದ ನೀವು ಏನು ಆಲೋಚಿಸುವಿರೆಂಬುದರ ಬಗ್ಗೆ ಎಚ್ಚರಿಕೆಯಿಂದಿರಿ" ಎಂದು ಸ್ವಾಮಿ ವಿವೇಕಾನಂದರು ಎಚ್ಚರಿಸಿದ್ದಾರೆ. ಕರ್ಮಯೋಗವು ಕೇವಲ ದೈಹಿಕ ಪರಿಶ್ರಮವೊಂದೇ ಅಲ್ಲ, ಮಾತನಾಡುವುದು, ಉಪದೇಶಿಸುವುದು, ಬರೆಯುವುದು ಎಲ್ಲವೂ ಅದರಲ್ಲಿ ಒಳಗೊಳ್ಳುತ್ತದೆ. ಜ್ಞಾನ ಹಾಗೂ ಪದ, ಪದ ಹಾಗೂ ಕಲ್ಪನೆಗಳ ನಡುವೆ ಅಭೇದ್ಯವಾದ ಸಂಬಂಧವಿದೆ. ಕರ್ಮಯೋಗಿಗೆ ಇದರ ಅರಿವಿರಬೇಕು ಹಾಗೂ ನಾಮರೂಪಗಳು ಹೇಗೆ ಮನಸ್ಸಿನಲ್ಲಿ ಉದಯಿಸುವುವು ಮತ್ತು ಅವುಗಳು ತನ್ನ ಹಾಗೂ ಇತರರ ಮೇಲೆ ಹೇಗೆ ಪ್ರಭಾವ ಬೀರುವುವೆಂದು ಸಹ ಅಧ್ಯಯನ ಮಾಡಬೇಕು. ನಿಜವಾದ ಕರ್ಮಯೋಗಿಯು ವ್ಯರ್ಥವಾದ ಆಲೋಚನೆ ಹಾಗೂ ಮಾತುಗಳಲ್ಲಿ ತನ್ನ ಶಕ್ತಿಯನ್ನು ವ್ಯಯಮಾಡುವುದಿಲ್ಲ. ಆತನು ಎಷ್ಟು ಶಕ್ತಿಯುತವಾಗಿ ಪದಗಳನ್ನು ಬಳಸುವನೆಂದರೆ ಅದು ಇತರರ ಮೇಲೆ ಪ್ರತಿಭಟಿಸಲಾಗದ ಪರಿಣಾಮವನ್ನು ಬೀರುವುದು.

ದಾನ ಮೂರನೆಯ ಅಂಶ. ದಾನವಿಲ್ಲದ ಕರ್ಮಯೋಗವೇ ಇಲ್ಲ, ಏಕೆಂದರೆ ಒಬ್ಬಾತನ ನಿರಾಸಕ್ತಿ ಹಾಗೂ ಇತರರಿಗಾಗಿ ಆತನ ಪ್ರೀತಿ ಇವುಗಳ ಪ್ರಾಯೋಗಿಕ ಪರೀಕ್ಷೆಯೇ ಅದು. ಪ್ರತಿಯೊಂದು ಶ್ರೇಷ್ಠ ಧರ್ಮವೂ ಇದು ಮಾನವನ ಮೂಲಭೂತ ಕರ್ತವ್ಯವೆಂದು ಪರಿಗಣಿಸುತ್ತದೆ. ಸರ್ಕಾರವು ಬಲವಂತವಾಗಿ ಆದಾಯ ತೆರಿಗೆಯನ್ನು ವಸೂಲಿಮಾಡುವುದೂ ಒಂದು ರೀತಿಯಲ್ಲಿ ಕಾನೂನಿನ ಒತ್ತಾಯಪೂರ್ವಕವಾದ ಲೌಕಿಕರೂಪದ ದಾನ. ಎಲ್ಲ ಜೀವನವೂ ಒಂದೇ ಮತ್ತು ನಮಗೆ ಅಧಿಕವಾಗಿರುವುದನ್ನು ಉಳಿದವರೊಡನೆ ಹಂಚಿಕೊಳ್ಳಲು ಪ್ರಕೃತಿಯೇ ಒತ್ತಾಯಿಸುವುದು. "ಜೀವನವಿಡೀ ಕೊಡುವುದೇ ಎಂಬುದನ್ನು ಕಲಿ, ಇಲ್ಲದಿದ್ದರೆ ಪ್ರಕೃತಿಯೇ ಒತ್ತಾಯಪೂರ್ವಕವಾಗಿ ಕೊಡುವಂತೆ ಮಾಡುವುದು. ಆದ್ದರಿಂದ ಮನಃಪೂರ್ವಕವಾಗಿ ಕೊಡು. ಈಗಲೋ ಅಥವಾ ಮುಂದೋ ನೀನು ಕೊಡಲೇಬೇಕಾಗುವುದು. ಸಂಚಯ ಮಾಡಲು ನೀನು ಜೀವನಕ್ಕೆ ಬರುವೆ. ಭದ್ರವಾದ ಕೈಗಳಿಂದ ನೀನು ತೆಗೆದುಕೊಳ್ಳಲು ನೋಡುವೆ. ಆದರೆ ಪ್ರಕೃತಿಯು ನಿನ್ನ ಕುತ್ತಿಗೆಯನ್ನು ಹಿಚುಕಿ ಕೈಗಳನ್ನು ಬಿಡಿಸುವಳು" ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ (*ಕೃತಿಶ್ರೇಣಿ*, ೬.೨೪೬).

ದಾನವೆಂದರೆ ಕೇವಲ ಭೌತಿಕ ವಸ್ತುಗಳನ್ನು ಕೊಡುವುದೆಂದಲ್ಲ ಅಥವಾ ಕೇವಲ ಶ್ರೀಮಂತರಿಗೆ ಮಾತ್ರವೇ ಅನ್ವಯಿಸುವ ಶಿಸ್ತಲ್ಲ. ಪ್ರತಿಯೊಬ್ಬರೂ ಕೊಡಲೇಬೇಕು; ಬಡವರಿಗೂ ಈ ನಿಯಮದಿಂದ ವಿನಾಯಿತಿ ಇಲ್ಲ. ಒಬ್ಬನಿಗೆ ಧನಕನಕಾದಿಗಳನ್ನು ಕೊಡಲು ಶಕ್ತಿಯಿಲ್ಲದಿದ್ದರೆ, ಆತನು ಜ್ಞಾನ, ಸೇವೆ ಅಥವಾ ಪ್ರೀತಿಯನ್ನಾದರೂ ನೀಡಬೇಕು. ಈಗ ನೈಜಜ್ಞಾನ ಹಾಗೂ ಶುದ್ಧಪ್ರೀತಿಗಾಗಿ ವಿಪರೀತ ಹಸಿವು ಎಲ್ಲರನ್ನೂ ಬಾಧಿಸುತ್ತಿದೆ. ಎಲ್ಲಕ್ಕಿಂತಲೂ ಮಿಗಿಲಾಗಿ ಎಲ್ಲರಿಗೂ ಸ್ವಾತಂತ್ರ್ಯ—ಅವರದೇ ಆದ ನಿಯಮಕ್ಕೆ ಅನುಸಾರವಾಗಿ ಬೆಳೆಯಲು ಸ್ವಾತಂತ್ರ್ಯ—ನೀಡಲಿ.

ಇನ್ನೊಬ್ಬರ ಆಧ್ಯಾತ್ಮಿಕ ಜ್ಞಾನಪ್ರಕಾಶನಕ್ಕೆ ಸಹಾಯ ಮಾಡುವುದೇ ಅತ್ಯಂತ ಉನ್ನತವಾದ ದಾನ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಆಧ್ಯಾತ್ಮಿಕ ಜೀವನದಲ್ಲಿ ಒಬ್ಬಾತನು ಬಹಳಷ್ಟು ಪ್ರಗತಿ ಹೊಂದಿಲ್ಲದಿದ್ದರೂ, ಕಡೇ ಪಕ್ಷ ಇತರರ ಆಧ್ಯಾತ್ಮಿಕ ಉನ್ನತಿಗಾಗಿ ಸತತವಾಗಿ ಪ್ರಾರ್ಥನೆಯನ್ನಾದರೂ ಮಾಡಬೇಕು. ಸ್ವಾಮಿ ವಿವೇಕಾನಂದರು ಒಮ್ಮೆ ತಮ್ಮ ಶಿಷ್ಯನಿಗೆ ಹೀಗೆ ಪ್ರಾರ್ಥಿಸಲು ಹೇಳುತ್ತಾ, "ಈ ರೀತಿಯ ಸತತವಾದ ಆಲೋಚನಾ ತರಂಗಗಳಿಂದಲೂ ಪ್ರಪಂಚಕ್ಕೆ ಒಳ್ಳೆಯದಾಗುವುದು. ಪ್ರಪಂಚದಲ್ಲಿ ಒಳ್ಳೆಯದಾವುದೂ—ಕರ್ಮವಾಗಲಿ ಆಲೋಚನೆಯಾಗಲಿ—ಎಂದಿಗೂ ನಿಷ್ಫಲವಾಗುವುದಿಲ್ಲ. ನಿಮ್ಮ ಆಲೋಚನಾ ತರಂಗಗಳು ಅಮೆರಿಕದಲ್ಲಿರುವ ಯಾವುದೋ

**ಎಲ್ಲ ಕೆಲಸಗಳನ್ನು ವಿಶ್ವಯಜ್ಞದ ಒಂದು ಭಾಗವಾಗಿ ಯಾರು ಪರಿಗಣಿಸುವರೋ, ಅಂತಹವರು ಕರ್ಮಫಲಕ್ಕೆ ಅಂಟಿಕೊಳ್ಳುವುದಿಲ್ಲ.**

ಒಂದು ವ್ಯಕ್ತಿಯಲ್ಲಿ ಆಧ್ಯಾತ್ಮಿಕ ಭಾವನೆಗಳನ್ನು ಎಚ್ಚರಗೊಳಿಸಬಹುದು." (*ಶ್ರುತಿಶ್ರೇಣಿ,* ೮.೨೩೩)

ಆಸೆಗಳಿಂದ ಇಚ್ಛಾಶಕ್ತಿಯನ್ನು ಬೇರ್ಪಡಿಸಿ ಸಮಷ್ಟಿಮನಸ್ಸಿನೊಡನೆ ಸಮನ್ವಯಗೊಳಿಸಿದಾಗಲೇ ತಪಸ್ಸು, ದಾನ, ಸ್ವಾಧ್ಯಾಯಗಳು ಆಧ್ಯಾತ್ಮಿಕವಾಗಿ ಪರಿಣಾಮಕಾರಿಯಾಗುವುವು. ಈ ಇಚ್ಛಾಶಕ್ತಿಯ ಬಿಡುಗಡೆ ಹಾಗೂ ಚೈತನ್ಯದ ವಿಸ್ತರಣೆಯನ್ನು ಯಜ್ಞ ಅಥವಾ ಈಶ್ವರಾರ್ಪಣ ಎಂಬ ನಾಲ್ಕನೆಯ ಅತಿ ಮುಖ್ಯವಾದ ಕರ್ಮಯೋಗದ ಸಾಧನೆಯ ಮೂಲಕ ಗಳಿಸಬಹುದು.

ವ್ಯಕ್ತಿಯ ಮಾನಸಿಕ ಬೆಳವಣಿಗೆ ಹಾಗೂ ಸತ್ಯವನ್ನು ಕುರಿತ ಮನೋಭಾವಕ್ಕೆ ಅನುಸಾರವಾಗಿ ಈ ಸಮನ್ವಯತೆಯನ್ನು ಗಳಿಸಲು ಅನೇಕ ಮಾರ್ಗಗಳಿವೆ ಮತ್ತು ಅದಕ್ಕನುಸಾರವಾಗಿ ಅನೇಕ ರೀತಿಯ ಕರ್ಮಯೋಗಗಳಿವೆ. ಈ ಕರ್ಮಯೋಗಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು: ನಿಷ್ಕಾಮ ಕರ್ಮ (ಫಲಾಪೇಕ್ಷೆಯಿಲ್ಲದೆ ಮಾಡುವ ಕರ್ಮ), ಭಗವತ್-ಪ್ರೀತಿ-ಕಾಮ-ಕರ್ಮ (ದೇವರನ್ನು ಮೆಚ್ಚಿಸಲು ಮಾಡುವ ಕರ್ಮ) ಪ್ರಪತ್ತಿ (ದೇವರಲ್ಲಿ ಸಂಪೂರ್ಣ ಶರಣಾಗತಿ) ಮತ್ತು ವಿಶ್ವಲೀಲೆಯಲ್ಲಿ ಭಾಗವಹಿಸುವ ಕರ್ಮ.

## ನಿಷ್ಕಾಮ ಕರ್ಮ

ಹೀಗೆಂದರೆ ಫಲಾಪೇಕ್ಷೆಯಿಲ್ಲದೆ ಮಾಡುವ ಕರ್ಮ. ಸ್ವಾಮಿ ವಿವೇಕಾನಂದರು ಇದನ್ನು "ಕರ್ಮಕ್ಕೋಸ್ಕರ ಕರ್ಮ" ಎಂದು ಕರೆಯುತ್ತಾರೆ. ಇಲ್ಲಿ ಕೇವಲ ಪುರುಷಪ್ರಯತ್ನವೊಂದೇ ಮುಖ್ಯ. ದೇವರ ಕೃಪೆಗೆ ಸ್ಥಾನವಿಲ್ಲ. ಜ್ಞಾನಿಗಳು ಅನುಸರಿಸುವ ಮಾರ್ಗವೇ ಇದು. ಈ ಮಾರ್ಗದಲ್ಲಿ ಮೂರು ದೃಷ್ಟಿಕೋನಗಳಿರಲು ಸಾಧ್ಯ. ಒಂದು, ವೇದಗಳು ವಿಧಿಸಿವೆಯೆಂದು ಪ್ರತಿಯೊಬ್ಬರೂ ವೈದಿಕ ಕ್ರಿಯೆಗಳನ್ನು ಆಚರಿಸಬೇಕೇ ವಿನಃ ಬೇರಿನ್ನಾವ ಉದ್ದೇಶಗಳೂ ಕರ್ಮಗಳಿಗಿರಬೇಕಾಗಿಲ್ಲ ಎಂಬುದು. ಈ ಭಾವನೆಯನ್ನು ಹಿಂದೂ ಧರ್ಮವು ಬಹಳ ಹಿಂದೆಯೇ ಹೇಗೆ ತಿರಸ್ಕರಿಸಿತು ಎಂಬುದನ್ನಾಗಲೇ ವಿವರಿಸಲಾಗಿದೆ.

ಎರಡನೆಯ ದೃಷ್ಟಿಕೋನ "ಸಾಕ್ಷೀ" ಭಾವ. ಇಲ್ಲಿ ಎಲ್ಲ ಕರ್ಮಗಳನ್ನು ಪ್ರಕೃತಿಯ ನಿಗೂಢ ಕಾರ್ಯವೆಂದು ಅಥವಾ ಮಾಯೆಯ ಭ್ರಾಂತಿಯೆಂದು ಪರಿಗಣಿಸಲಾಗುವುದು. ಇಲ್ಲಿ, "ನಾನು" ಎಂಬ ಅಹಂಪ್ರತ್ಯಯವನ್ನು ಉನ್ನತವಾದ ಆತ್ಮದೊಡನೆ ಸಮೀಕರಿಸಲಾಗಿದೆ ಹಾಗೂ ಇದು ಎಲ್ಲ ದೈಹಿಕ ಮತ್ತು ಮಾನಸಿಕ ಬದಲಾವಣೆಗಳ ಸಾಕ್ಷಿಯಾಗಿ ಉಳಿಯುವುದು. ಗೀತೆಯು ಈ ದೃಷ್ಟಿಕೋನವನ್ನು ಅನೇಕ ಸ್ಥಳಗಳಲ್ಲಿ ವಿವರಿಸುತ್ತದೆ. ಜ್ಞಾನಿಗಳು ಈ ಭಾವವನ್ನು ಮುಖ್ಯವಾಗಿ ಅನುಸರಿಸುವರು.

ಯಜ್ಞದೃಷ್ಟಿಯಿಂದ ಕೆಲಸವನ್ನು ಮಾಡುವುದೇ ಮೂರನೆಯ ದೃಷ್ಟಿಕೋನ. ವೇದಗಳ ಕಾಲದಿಂದಲೂ ಸಂಪೂರ್ಣ ಜೀವನವು ಒಂದು ವಿಶ್ವಯಜ್ಞದಂತೆ ನಡೆಯುತ್ತಿದೆ ಎಂಬ ಭಾವನೆಯು ಭಾರತದಲ್ಲಿ ಪ್ರಚಲಿತವಾಗಿತ್ತು. ಸುಪ್ರಸಿದ್ಧವಾದ ಪುರುಷಸೂಕ್ತವು ಸೃಷ್ಟಿಯು ಪ್ರಜಾಪತಿ ಅಥವಾ ವಿಶ್ವಾತ್ಮನ ಯಜ್ಞದ ಫಲವೆಂದು ಬಣ್ಣಿಸುತ್ತದೆ. ಈ ವಿಶ್ವಯಜ್ಞವು ಪ್ರತಿಯೊಬ್ಬನಿಗೂ ಜೀವಿಸಲು ಶಕ್ತಿಯನ್ನು ಒದಗಿಸುತ್ತದೆ ಹಾಗೂ ಪ್ರತಿಯೊಂದು ವ್ಯಕ್ತಿಯೂ ತನ್ನ ಅಲ್ಪಾಯುಸ್ಸಿನಲ್ಲಿ ಈ ಯಜ್ಞಚಕ್ರವನ್ನು ಮುಂದುವರಿಸಿಕೊಂಡು ಹೋಗಬೇಕು. ಈ ಯಜ್ಞದಲ್ಲಿ ಭಾಗವಹಿಸಲು ಪ್ರತಿಯೊಬ್ಬರಿಗೂ ಅಲ್ಪವಾದ ಆಯುಸ್ಸನ್ನು ನೀಡಲಾಗಿದೆ. ಜೀವಿಯು ತನ್ನನ್ನು ತಾನೇ ತ್ಯಾಗ ಮಾಡುವುದರ ಮೂಲಕ ಮತ್ತೊಂದು ಜೀವಿಗೆ ಇದರಲ್ಲಿ ಭಾಗವಹಿಸಲು ಆಸ್ಪದವನ್ನು ನೀಡುವುದು. ಈ ಸತ್ಯವನ್ನು ಅರಿತು, ಎಲ್ಲ ಕೆಲಸಗಳನ್ನು ವಿಶ್ವಯಜ್ಞದ ಒಂದು ಭಾಗವಾಗಿ ಯಾರು ಪರಿಗಣಿಸುವರೋ, ಅಂತಹವರು ಕರ್ಮಫಲಕ್ಕೆ ಅಂಟಿಕೊಳ್ಳುವುದಿಲ್ಲ.

ಆದ್ದರಿಂದಲೇ ಗೀತೆಯು, "ಜನರು ಕರ್ಮದಿಂದ ಬಂಧಿಸಲ್ಪಡುತ್ತಾರೆ, ಏಕೆಂದರೆ ಅವರು ಅದನ್ನು ಯಜ್ಞದಂತೆ ಮಾಡುವುದಿಲ್ಲ" ಎನ್ನುತ್ತದೆ (ಗೀತೆ, ೩.೯). ನಾಲ್ಕನೆಯ ಅಧ್ಯಾಯದಲ್ಲಿ ಗೀತೆಯು ಹೇಗೆ ಎಲ್ಲ ದೈಹಿಕ ಹಾಗೂ ಮಾನಸಿಕ ಕಾರ್ಯಗಳನ್ನು ಯಜ್ಞದಂತೆ ಮಾಡಬಹುದೆಂಬುದನ್ನು ಹೇಳಿಕೊಡುತ್ತದೆ. (ಗೀತೆ, ೪.೨೩-೩೨).

ನಿಷ್ಕಾಮಕರ್ಮವನ್ನು ಮೇಲೆ ಹೇಳಿದ ಯಾವುದಾದರೂ ಮೂರು ದೃಷ್ಟಿಕೋನಗಳಲ್ಲಿ ಮಾಡಬಹುದು. ಆದರೆ ಇದು ಸುಲಭವಾದ ಮಾರ್ಗವಲ್ಲವೆಂದು ಆಧುನಿಕ ಯುಗದಲ್ಲಿ ಇದನ್ನು ಜನಪ್ರಿಯಗೊಳಿಸಿದ ಸ್ವಾಮಿ ವಿವೇಕಾನಂದರೇ ಎಚ್ಚರಿಸುತ್ತಾರೆ."'ಕರ್ಮಕ್ಕೋಸ್ಕರವೇ ನಾನು ಕರ್ಮ ಮಾಡುವೆ' ಎಂದು ಬಾಯಲ್ಲಿ ಹೇಳುವುದಕ್ಕಿಂದ ಸುಲಭವಾದದ್ದು ಬೇರೊಂದಿಲ್ಲ. ಆದರೆ ಅದನ್ನು ಕೃತಿಗಿಳಿಸುವಷ್ಟು ಕಷ್ಟಕರವಾದದ್ದು ಯಾವುದೂ ಇಲ್ಲ. ಕರ್ಮಕ್ಕೋಸ್ಕರವೇ ಕರ್ಮ ಮಾಡುವಾತನ ಮುಖವನ್ನು ನೋಡಲು, ನಾನು ತೆವಳಿಕೊಂಡು ೨೦ ಮೈಲಿಗಳು ಬೇಕಾದರೂ ಹೋಗಬಲ್ಲೆ. ನಮಗೇ ತಿಳಿಯದಂತೆ ಯಾವುದೋ ಕಾಮನೆ ಕರ್ಮದೊಡನೆ ಬೆರೆತುಕೊಂಡುಬಿಡುತ್ತದೆ" (*ಶ್ರುತಿಶ್ರೇಣಿ* ೫:೩೦೯). ಆದ್ದರಿಂದ ಬಹಳ ಮಂದಿ ಸಾಧಕರಿಗೆ ದೇವರ ಪ್ರೀತಿಯೊಡನೆ ಸಂಬಂಧಿಸಿದಾಗ ಕರ್ಮಯೋಗದ ಅಭ್ಯಾಸ ಸುಲಭವಾಗುತ್ತದೆ.

(ಮುಂದುವರಿಯುತ್ತದೆ.)